**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ .**

**ಎಸ್.ಸಿ. ನಂ.02/2025**

**ದಿನಾಂಕಃ 15 ನೇ ಏಪ್ರಿಲ್ 2025**

**ಫಿರ್ಯಾದುದಾರರು** ಃ ಕೆ.ಟಿ.ಜೆ.ನಗರ ಪೊಲೀಸ್ ಠಾಣೆ.

-/ **ವಿರುದ್ಧ** /-

**ಆರೋಪಿ /ತರು** ಃ ಗೌತಮ್ ಪವಾರ್

**ದೋಷಾರೋಪಣೆ**

ಶ್ರೀಯುತ ಃ **ಎಂ.ಹೆಚ್. ಅಣ್ಣಯ್ಯನವರ** ಬಿಕಾಂ.ಎಲ್.ಎಲ್.ಬಿ. (ವಿಶೇಷ), 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ, ಆದ ನಾನು ನಿಮ್ಮನ್ನು ಅಂದರೆ,

ಗೌತಮ್ ಪವಾರ್ ಬಿನ್ ಲೇಟ್ ಅಶೋಕ್, ವಯಸ್ಸು 25 ವರ್ಷ, ಡ್ರೈವರ್ ಕೆಲಸ, ವಾಸ ಸಾಯಿ ಗಾರ್ಮೆಂಟ್ಸ ಹಿಂಭಾಗ, ನಿಟುವಳ್ಳಿ, ದಾವಣಗೆರೆ.

ಆರೋಪಿಗಳಾದ ನಿಮ್ಮ ಮೇಲಿನ ದೋಷಾರೋಪಣೆ ಈ ಕೆಳಕಂಡಂತೆ ಇರುತ್ತದೆ.

ದಿಃ 21/09/2024 ರಂದು ಸಂಜೆ 5-15 ಗಂಟೆ ಸಮಯದಲ್ಲಿ ದಾವಣಗೆರೆ ಕೆ.ಟಿ.ಜೆ.ನಗರದ 15 ನೇ ಕ್ರಾಸ್‌ನಲ್ಲಿರುವ ಪ್ರಕಾಶ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಆರೋಪಿಯ ಅಕ್ಕ ಚಾಸಾ.21 ಪೂಜಾರವರು ಮೃತ ವ್ಯಕ್ತಿ ಹನುಮಂತ ಎನ್. ಯಾನೇ ಕುಮಾರನೊಂದಿಗೆ ಅನೈತಿಕ ಸಂಬಂಧ ಹೊಂದಿರುತ್ತಾಳೆ ಎಂದು ತಿಳಿದು ದ್ವೇಷ ಬೆಳೆಸಿಕೊಂಡು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಆರೋಪಿಯಾದ ನೀನು ಚಾಕುವಿನಿಂದ ಹನುಮಂತ ಎನ್. ಯಾನೇ ಕುಮಾರನ ಎಡಪಕ್ಕೆಗೆ 2 ಬಾರಿ ಚುಚ್ಚಿದ್ದು, ಬಲಪಕ್ಕೆಗೆ ಮತ್ತು ಬೆನ್ನಿಗೆ ಚುಚ್ಚಿ ಕೊಲೆ ಮಾಡಿರುತ್ತೀರಿ, ಹಾಗಾಗಿ ಆರೋಪಿಯಾದ ನೀನು ಬಿ.ಎನ್.ಎಸ್. ಕಲಂ.103(1)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

(ಎಂ.ಹೆಚ್.ಅಣ್ಣಯ್ಯನವರ್ )
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ**

**ಎಸ್.ಸಿ. ನಂ.02/2025**

ಗೌತಮ್ ಪವಾರ್ ಬಿನ್ ಲೇಟ್ ಅಶೋಕ್, ವಯಸ್ಸು 25 ವರ್ಷ, ಡ್ರೈವರ್ ಕೆಲಸ, ವಾಸ ಸಾಯಿ ಗಾರ್ಮೆಂಟ್ಸ ಹಿಂಭಾಗ, ನಿಟುವಳ್ಳಿ, ದಾವಣಗೆರೆ.

**ಆರೋಪಣೆ**

ಪ್ರಶ್ನೆ 1 ಈಗ ಓದಿ ಹೇಳಿದ ಅಪಾದನೆ ನಿನಗೆ ತಿಳಿಯಿತೆ?

ಉತ್ತರ ಃ

ಪ್ರಶ್ನೆ 2 ನೀನು ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೇ?

ಉತ್ತರ ಃ

(ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ತನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿ ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

(ಎಂ.ಹೆಚ್.ಅಣ್ಣಯ್ಯನವರ್ )
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.